# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ – 583105.

ಕುಲಸಚಿವರು(ಮೌಲ್ಯಮಾಪನ) ದೂರವಾಣಿ: 08392-241011

ಕ್ರ.ಸಂ.ವಿಶ್ರೀಕೃವಿಬ/ಪರೀಕ್ಷಾ/ಮಾರ್ಗಸೂಚಿ/2020-21/555 ದಿನಾಂಕ: 25.08.2020

## ಸುತ್ತೋಲೆ

**ವಿಷಯ:** ಇಂಟರ್‌ಮೀಡಿಯೇಟ್ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಗಳನ್ನು ಜರುಗಿಸದೆ ಫಲಿತಾಂಶ ಪ್ರಕಟಿಸುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ED 197 UNE 2020 ಬೆಂಗಳೂರು ದಿನಾಂಕ: 10.07.2020
2. ಡೀನರ ಸಮಿತಿಯ ಅನುಮೋದನೆ ದಿನಾಂಕ: 20.08.2020
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 20.08.202

ಜಗತ್ತಿನಾದ್ಯಂತ ಕೋವಿಡ್-19 ತೀವ್ರವಾಗಿ ವ್ಯಾಪಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಉಲ್ಲೇಖಿತ ಪತ್ರದನ್ವಯ ಯುಜಿಸಿಯ ಪರಿಷ್ಕೃತ ಮಾರ್ಗಸೂಚಿಗಳಲ್ಲಿ ನಿರ್ದೇಶಿಸಿದಂತೆ ಇಂಟರ್‌ಮೀಡಿಯೇಟ್ ಎಲ್ಲಾ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳನ್ನು ಜರುಗಿಸದೆ ಫಲಿತಾಂಶ ಪ್ರಕಟಿಸಲು ಕ್ರಮ ಕೈಗೊಳ್ಳಲು ಈ ಮೂಲಕ ಆದೇಶಿಸಲಾಗಿದೆ.

ಈ ಆದೇಶವನ್ನು ಜಾರಿಗೆ ತರುವಲ್ಲಿ ವಿಶ್ವವಿದ್ಯಾನಿಲಯವು ತನ್ನದೇ ಆದ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಬೇಕಿದೆ. ಕಾರಣ ಈ ಕೆಳಗಿನ ಸೂತ್ರಗಳನ್ನು ಅನುಸರಿಸಿ ಇಂಟರ್‌ಮೀಡಿಯೇಟ್ ಸೆಮಿಸ್ಟರ್‌ಗಳಿಗೆ ಪರೀಕ್ಷೆ ಜರುಗಿಸದೇ ಫಲಿತಾಂಶ ಪ್ರಕಟಣೆ ಮಾಡಬೇಕಿದೆ. ಇದರನ್ವಯ ವಿಶ್ವವಿದ್ಯಾಲಯವು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುವಂತೆ ನಿರ್ದೇಶಿಸಿದೆ.

1. 2019-20ರ ಪ್ರಸ್ತುತ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಯು ಕನಿಷ್ಠ 75% ಹಾಜರಾತಿಯನ್ನು ಹೊಂದಿರಬೇಕು (Lock down – ಅವಧಿಯನ್ನು ಅವರ ಹಾಜರಾತಿಯೆಂದು ಪರಿಗಣಿಸುವುದು)
2. ವಿಶ್ವವಿದ್ಯಾಲಯ ನಿಯಮಾನುಸಾರ ನಿಗದಿತ ನಮೂನೆಯಲ್ಲಿ ನಿಗದಿತ ಪರೀಕ್ಷಾ ಶುಲ್ಕ ಪಾವತಿಸಿರಬೇಕು.
3. ಇಂಟರ್‌ಮೀಡಿಯೇಟ್ ಸೆಮಿಸ್ಟರ್‌ನ ಪ್ರತಿ ಕೋರ್ಸಿನ ಆಂತರಿಕ ಮೌಲ್ಯ ಮಾಪನದ (CIE-Continuous Internal Evaluation) ಅಂಕಗಳನ್ನು 50ಕ್ಕೆ ಮಾರ್ಪಡಿಸಿಕೊಳ್ಳುವುದು (Scale up)
4. ಹಿಂದಿನ ಸೆಮಿಸ್ಟರ್‌ನ ವಿದ್ಯಾರ್ಥಿಯ ಒಟ್ಟಾರೆ ಫಲಿತಾಂಶದ (SEE-Semester End Examination) ಸರಾಸರಿ ಅಂಕಗಳನ್ನು 50ಕ್ಕೆ ಮಿತಿಗೊಳಿಸಿಕೊಂಡು (Scale Down) ಅಂಕಗಳನ್ನು ಪ್ರಸ್ತುತ ಸೆಮಿಸ್ಟರ್‌ನ ಎಲ್ಲಾ ವಿಷಯಗಳಿಗೂ ಮುಖ್ಯ ಪರೀಕ್ಷೆಯ (SEE) ಅಂಕಗಳಾಗಿ ಪರಿಗಣಿಸುವುದು.
5. ಹಿಂದಿನ ಸೆಮಿಸ್ಟರ್‌ನ ಒಟ್ಟಾರೆ ಅಂಕಗಳ ಸರಾಸರಿಯಲ್ಲಿ ಗರಿಷ್ಠ 50ಕ್ಕೆ ಕನಿಷ್ಠ 15 ಅಂಕಗಳನ್ನು (15/50) ಪಡೆದ ವಿದ್ಯಾರ್ಥಿಯು ಚತುರ್ಮಾಸದ ಕೊನೆಯ ಪರೀಕ್ಷೆಯಲ್ಲಿ (SEE) ಉತ್ತೀರ್ಣನೆಂದು ಪರಿಗಣಿಸುವುದು.
6. ಎಲ್ಲಿ ಅಂಕಗಳನ್ನು ಮಿತಿಗೊಳಿಸಬೇಕಾಗಿದೆಯೊ, ಅಲ್ಲಿ ದಶಮಾಂಶಗಳನ್ನು ಮುಂದಿನ ಪೂರ್ಣ ಅಂಕೆಗೆ (Round Off To Next Integer) ಮಾರ್ಪಾಡು ಮಾಡಿಕೊಳ್ಳುವುದು.
7. ಪ್ರಸ್ತುತ ಸೆಮಿಸ್ಟರ್‌ನ ಯಾವುದೇ ಕೋರ್ಸ್‌ಗೆ ಒಟ್ಟಾರೆ ಅಂಕಗಳನ್ನು ನೀಡುವಾಗ ಕೆಳಗಿನ ವಿಧಾನವನ್ನು ಅಳವಡಿಸಿಕೊಳ್ಳುವುದು.

ಒಟ್ಟಾರೆ ಕೋರ್ಸ್‌ನ ಅಂಕಗಳು (ಗರಿಷ್ಠ 100 ಕ್ಕೆ) = ಆಂತರಿಕ ಮೌಲ್ಯಮಾಪನದ (CIE) ಒಟ್ಟು ಅಂಕಗಳು (50 ಕ್ಕೆ ನಿಗಧಿಪಡಿಸಿದಂತೆ) + ಹಿಂದಿನ ಸೆಮಿಸ್ಟರ್‌ನ (SEE) ಒಟ್ಟಾರೆ ಅಂಕಗಳ ಸರಾಸರಿ ಅಂಕಗಳು (ಗರಿಷ್ಠ 50 ಕ್ಕೆ ಮಿತಿಗೊಳಿಸಿದಂತೆ)

8. ಯಾವುದೇ ವಿಧ್ಯಾರ್ಥಿಯು ಹಿಂದಿನ ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಗೈರು ಹಾಜರು ಆಗಿದ್ದಲ್ಲಿ ಆ ವೇಳೆ ಪ್ರಸಕ್ತ ಸೆಮಿಸ್ಟರ್‌ನ ಅಂಕಗಳನ್ನು "ಸೊನ್ನೆ" (0)ಯೆಂದು ಪರಿಗಣಿಸುವುದು.
9. ಹಿಂದಿನ ಸೆಮಿಸ್ಟರ್‌ಗಳಲ್ಲಿ ಬಾಕಿ ಉಳಿಸಿಕೊಂಡಿರುವ ವಿಷಯಗಳನ್ನು ಆ ವಿಧ್ಯಾರ್ಥಿಯು ಮುಂದಿನ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕು.
10. ಪ್ರಸ್ತುತ ಪದವಿ ವಿದ್ಯಾರ್ಥಿಗಳ ಹಿಂದಿನ ಚತುರ್ಮಾಸದ ಫಲಿತಾಂಶವು ಲಭ್ಯವಿಲ್ಲದಿದ್ದಾಗ, ಒಟ್ಟಾರೆ ಅಂಕಗಳನ್ನು ಕೇವಲ ಆಂತರಿಕ ಮೌಲ್ಯಮಾಪನದ ಅಂಕಗಳ ಆಧಾರದ ಮೇಲೆ ನಿರ್ಧರಿಸುವುದು.
11. ಕನಿಷ್ಠ ಆಂತರಿಕ ಮೌಲ್ಯಮಾಪನ ಅಂಕಗಳು, (CIE) ಅಂತಿಮ ಪರೀಕ್ಷೆಯ ಅಂಕಗಳು (SEE) ಮತ್ತು ಒಟ್ಟಾರೆ ವಿದ್ಯಾರ್ಥಿಯು ಪಡೆದ ಅಂಕಗಳು ವಿಶ್ವವಿದ್ಯಾಲಯದ ಚಾಲ್ತಿಯಲ್ಲಿರುವ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.
12. ವಿದ್ಯಾರ್ಥಿಗೆ ಗ್ರೇಡ್‌ನ್ನು ನೀಡುವಾಗ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ನು ಪಾಲಿಸುವುದು.
13. ಯಾವುದೇ ಪ್ರಸ್ತುತ ಸೆಮಿಸ್ಟರ್‌ನ ವಿದ್ಯಾರ್ಥಿಯು ತನ್ನ ಫಲಿತಾಂಶದ ದರ್ಜೆಯನ್ನು ವೃದ್ಧಿಸಿಕೊಳ್ಳಲು ಇಚ್ಛಿಸಿದಲ್ಲಿ ಅಂತಹ ವಿದ್ಯಾರ್ಥಿಗೆ ಮುಂಬರುವ ಪರೀಕ್ಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವುದು. ಮತ್ತು ಅದನ್ನು ಆ ವಿದ್ಯಾರ್ಥಿಯ ಪ್ರಥಮ ಪ್ರಯತ್ನ ಎಂದು ಪರಿಗಣಿಸುವುದು.
14. ಪ್ರಸ್ತುತ ಇಂಟರ್‌ಮೀಡಿಯಟ್ ಸೆಮಿಸ್ಟರ್‌ನ ಎಲ್ಲಾ ವಿದ್ಯಾರ್ಥಿಗಳಿಗೂ Carry Forward ಯೋಜನೆಯಲ್ಲಿ ಮುಂದಿನ ಸೆಮಿಸ್ಟರ್‌ಗೆ ಅನುಮತಿ ನೀಡುವುದು.

ಈ ಮೇಲ್ಕಂಡ ಎಲ್ಲಾ ನಿಯಮಗಳನ್ನು ಅನ್ವಯಿಸಿ ಎಲ್ಲಾ ಇಂಟರ್‌ಮೀಡಿಯೇಟ್ ಸೆಮಿಸ್ಟರ್ ವಿದ್ಯಾರ್ಥಿಗಳನ್ನ ಮುಂದಿನ ಸೆಮಿಸ್ಟರ್‌ಗಳಿಗೆ ತೇರ್ಗಡೆಗೊಳಿಸಲಾಗುವುದು.

25/8/2020
ಕುಲಸಚಿವರು (ಮೌಲ್ಯಮಾಪನ)
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಗೆ,

1. ಎಲ್ಲಾ ಸ್ನಾತಕ/ಬಿ.ಎಡ್/ಸ್ನಾತಕೋತ್ತರ ಪ್ರಾಚಾರ್ಯರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟ ಮಹಾವಿದ್ಯಾಲಯಗಳು ಇವರ ಮುಂದಿನ ಕ್ರಮಕ್ಕಾಗಿ.
2. ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ಸಂಯೋಜಕರು ಹಾಗೂ ಮುಖ್ಯಸ್ಥರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಇವರ ಮುಂದಿನ ಕ್ರಮಕ್ಕಾಗಿ.

**ಪ್ರತಿಗಳು:**

1) ಮಾನ್ಯ ಕುಲಪತಿಗಳು ಆಪ್ತ ಕಾರ್ಯದರ್ಶಿ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ, ಇವರಿಗೆ.
2) ಮಾನ್ಯ ಕುಲಸಚಿವರು ಆಪ್ತ ಕಾರ್ಯದರ್ಶಿ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ, ಇವರಿಗೆ.
3) ಕಛೇರಿ ಪ್ರತಿ.